

## ಮಂಕಿಬಾತ್!

ಗುಂಡ ಪೇಪರ್ ಓದುತ್ತಾ ಕುಳಿತಿದ್ದಾಗ ಗುಂಡಿ ಬುಸುಗುಡುತ್ತಾ ಬಂದು, 'ನಾನೂ ಬಿಸಿಬೇಳೆಬಾತ್, ವಾಂಗೀಬಾತ್, ಪಕಾಳಾಬಾತ್ ಎಲ್ಲಾ ಕೇಳಿದ್ದೀನಿ. ಆದ್ರೆ, ಪಕ್ಕದ್ಮನೆ ಪಮ್ಮಿ ಹೇಳಿದಳು– ಪ್ರಧಾನಿಯವರು ಟೀವಿಯಲ್ಲಿ ಹೇಳಿಕೊಡದೇ ರೇಡಿಯೋಲಿ ಮಾತ್ರ ಅದೇನೋ 'ಮಂಕಿಬಾತ್' ಅನ್ನೋದನ್ನು ಪ್ರತಿ ತಿಂಗಳೂ ಹೇಳಿಕೊಡ್ತಾರಂತೆ' ಅಂದಳು. ಅದಕ್ಕೆ ಗುಂಡ, 'ಅಯ್ಯೋ ಹುಚ್ಚೀ, ಅದು ಮಂಕಿಬಾತಲ್ಲ ಕಣೆ, ಮನ್ ಕಿ ಬಾತ್. ಅಂದರೆ ಮನದ ಮಾತು ಅಂತ. ಆಯಾ ಸರ್ಕಾರದ ವಿಚಾರಗಳನ್ನು ಎಲ್ಲರೂ ತಿಳಿಯಲಿ ಅಂತ ಹೇಳೋ ಕಾರ್ಯಕ್ರಮ' ಅಂದಾಗ, ಗುಂಡಿ, 'ಹೌದಾ, ಹಾಗಾದರೆ ಪಮ್ಮಿಗೆ ತರಾಟೆ ತೊಗೋತೀನಿ ಬಿಡಿ' ಎಂದು ಅಲ್ಲಿಂದ ನಡೆದಳು.

**ಅರ್ಚನಾ ವಿ. ರಾವ್**

## ಮ್ಯಾರೇಜ್ ಬ್ಯೂರೊ

ಆನ್‌ಲೈನ್ ವಿವಾಹ ಬ್ಯೂರೊಗೆ ಫೋನಾಯಿಸಿದಾಗ–

'ಸೌಂದರ್ಯಕ್ಕಾಗಿ ಸಂಖ್ಯೆ ಒಂದನ್ನು ಒತ್ತಿ, ವಿದ್ಯಾಭ್ಯಾಸಕ್ಕಾಗಿ ಸಂಖ್ಯೆ ಎರಡನ್ನು ಒತ್ತಿ, ಆರ್ಥಿಕ ವಿಷಯಕ್ಕಾಗಿ ಸಂಖ್ಯೆ ಮೂರನ್ನು ಒತ್ತಿ, ನಮ್ಮನ್ನು ನೇರವಾಗಿ ಸಂಪರ್ಕಿಸಲು ಸಂಖ್ಯೆ ಒಂಬತ್ತನ್ನು ಒತ್ತಿ...'

ಸಂಖ್ಯೆ ಒಂಬತ್ತನ್ನು ಒತ್ತಿದಾಗ ಮಾತು ಮುಂದುವರಿಯಿತು.

'ಹಲೋ, ಆನ್‌ಲೈನ್ ಮ್ಯಾರೇಜ್ ಬ್ಯೂರೊಗೆ ಸ್ವಾಗತ, ಸುಸ್ವಾಗತ. ತಮಗೆ ನಮ್ಮಿಂದ ಯಾವ ರೀತಿಯ ಸಹಾಯ ಬೇಕು?'

'ಎರಡನೆಯ ಮದುವೆಯಾಗಲು ನಾನು ಎಲ್ಲಿ ಒತ್ತಬೇಕು?'

'ಮೊದಲನೆಯ ಹೆಂಡತಿಗೆ ಏನಾಯಿತು?'

'ಅವಳು ನನ್ನ ಜೊತೆಗೇ ಇದ್ದಾಳೆ. ಅವಳು ಒಂದು ನಿಮಿಷ ಕೂಡ ನನಗೆ ನೆಮ್ಮದಿ ಕೊಡುತ್ತಿಲ್ಲ. ಬದುಕೇ ಸಾಕೆನಿಸಿದಾಗ ಎರಡನೆಯ ಮದುವೆಯ ಬಗ್ಗೆ ಯೋಚಿಸಿದೆ.'

'ಹಾಗಾದರೆ ನಿಮ್ಮ ಮೊದಲ ಹೆಂಡತಿಯ ಕುತ್ತಿಗೆಯನ್ನೇ ಒತ್ತಿ.'

**ಕೆ.ಕೆ. ಗಂಗಾಧರನ್**



ಚಿತ್ರಗಳು: ಗಣೇಶ ಆಚಾರ್ಯ